ಬೈಲಹೊಂಗಲ ತಹಶೀಲ್ದಾರ್ ಆಫೀಸ್ ಕಟ್ಟಡ ನಿರ್ಮಾಣ

640 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಕಂದಾಯ ಮತ್ತು ಸಮಾಜ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆ ಬೈಲಹೊಂಗಲ ತಹಶೀಲ್ದಾರ್ ಕಟ್ಟಡ ಕಟ್ಟಿಸುವ ಸಲುವಾಗಿ 10.00 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗುವುದೆಂದು ನೀಡಿದ ಆಶ್ವಾಸನೆ ನಿಜವೆ?

ಆ) ಹಾಗಿದ್ದಲ್ಲಿ, ವಿಧಾನ ಸಭೆಯಲ್ಲಿ ನೀಡಿದ ಆಶ್ವಾಸನೆ ಪ್ರಕಾರ, ಈ ಕಟ್ಟಡಕ್ಕೆ 10.00 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿದ್ದಲ್ಲಿ, ಯಾವಾಗ ಬಿಡುಗಡೆ ಮಾಡಲಾಗಿದೆ ಮತ್ತು ಇದುವರೆಗೂ ಬಿಡುಗಡೆ ಮಾಡದೆ ಇದ್ದಲ್ಲಿ ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಮತ್ತು ಕಂದಾಯ ಮಂತ್ರಿಗಳು) :

ಅ) ನಿಜ.

ಆ) 1992ರಲ್ಲಿ ಮಿನಿ ವಿಧಾನ ಸೌಧ ನಿರ್ಮಾಣ ಮಾಡಲು ರೂ. 39.31 ಲಕ್ಷಗಳ ಅಂದಾಜಿಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ. ಅದರಂತೆ ಮಿನಿ ವಿಧಾನ ಸೌಧ ನಿರ್ಮಾಣದ ಸಲುವಾಗಿ 1992-93ರ ಸಾಲಿನಲ್ಲಿ ರೂ. 13.00 ಲಕ್ಷ ಮತ್ತು 93-94ರ ಸಾಲಿನಲ್ಲಿ 1.66 ಲಕ್ಷ ಒದಗಿಸಲಾಗಿದೆ.

ರಾಜ್ಯದಲ್ಲಿ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಇಲ್ಲದೇ ಇರುವುದರಿಂದ ತೊಂದರೆ

638 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಇಲ್ಲದೇ ಇರುವುದರಿಂದ ತೊಂದರೆಗೆ ಈಡಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಸರ್ಕಾರದವರು ಆ ಕಾರ್ಖಾನೆಗಳಿಗೆ ರಾಜ್ಯದ ಬೇರೆ ಕಡೆಯಿಂದ ಕಬ್ಬನ್ನು ಪೂರೈಸಲು ಯಾವ ಕ್ರಮ ಕೈಗೊಂಡಿರುವರು?

ಇ) ಕಳೆದ ವರ್ಷ ಫೆಬ್ರವರಿ ಅಂತ್ಯದವರೆಗೆ ರಾಜ್ಯದಲ್ಲಿ ಇರುವ ಪ್ರತಿಯೊಂದೂ ಸಕ್ಕರೆ ಕಾರ್ಖಾನೆಯವರು ಎಷ್ಟು ಕಬ್ಬನ್ನು ನುರಿಸುವರು? (ಪ್ರತಿಯೊಂದು ಕಾರ್ಖಾನೆಯ ಸಂಪೂರ್ಣವಾದ ವಿವರವನ್ನು ಕೊಡುವುದಾಗಬೇಕು)

ಈ) ಈ ವರ್ಷ ಪ್ರತಿಯೊಂದು ಫ್ಯಾಕ್ಟರಿಯವರು ಫೆಬ್ರವರಿ ಅಂತ್ಯದವರೆಗೆ ಎಷ್ಟು ಕಬ್ಬನ್ನು ನುರಿಸಿರುವರು?

ಉ) ರಾಜ್ಯದಲ್ಲಿರುವ ಕಬ್ಬನ್ನು ಹೊರರಾಜ್ಯಕ್ಕೆ ಕಳುಹಿಸಿರುವುದರಿಂದ ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳನ್ನು ನಡೆಸಲು ತೊಂದರೆಯಾಗುತ್ತಿರುವ ಸಂಗತಿ ನಿಜವೇ ಮತ್ತು ಹೊರರಾಜ್ಯಗಳಿಗೆ ಕಬ್ಬನ್ನು ಕಳುಹಿಸಿರುವುದರಿಂದ ರಾಜ್ಯಕ್ಕೆ ಎಷ್ಟು ಆರ್ಥಿಕ ನಷ್ಟವಾಗಿರುವುದು?

ಡಾ ಹೆಗ್ಗಪ್ಪ ಲಮಾಣಿ (ಸಕ್ಕರೆ ಸಚಿವರು) :

ಅ) ಬಂದಿದೆ

ಆ) ಪ್ರಸಕ್ತ ಸಾಲಿನಲ್ಲಿ ರಾಜ್ಯದಲ್ಲಿ ಬೆಳಗಾವಿ ಮತ್ತು ಬಿಜಾಪುರ ಜಿಲ್ಲೆಗಳನ್ನು ಬಿಟ್ಟರೆ ಉಳಿದೆಲ್ಲಾ ಜಿಲ್ಲೆಗಳಲ್ಲಿರುವ ಸಕ್ಕರೆ ಕಾರ್ಖಾನೆಗಳು ಕಬ್ಬಿನ ಕೊರತೆಯನ್ನು

ಅನುಭವಿಸುತ್ತಿವೆ. ಬೆಳಗಾವಿ ಮತ್ತು ಬಿಜಾಪುರ ಜಿಲ್ಲೆಯ ಕೆಲವು ಭಾಗಗಳಲ್ಲಿ ಹೆಚ್ಚುವರಿ ಕಬ್ಬು ಕಂಡುಬಂದಿದ್ದರೂ ಸದರಿ ಪ್ರದೇಶಗಳಿಂದ ಕಬ್ಬನ್ನು ಎತ್ತುವ ಮಾಡಲು ರಾಜ್ಯದ ಇತರೆ ಭಾಗದಲ್ಲಿರುವ ಯಾವುದೇ ಕಾರ್ಖಾನೆಗಳೂ ಮುಂದೆ ಬಂದಿರುವುದಿಲ್ಲ. ಅಥವಾ ಅನುಮತಿ ಕೋರಿ ಸರ್ಕಾರಕ್ಕೆ ಮನವಿ ಸಲ್ಲಿಸಿರುವುದಿಲ್ಲ. ಕಬ್ಬಿನ ಕೊರತೆ ಇರುವ ಕಾರ್ಖಾನೆಗಳು ತಮ್ಮ ಮೀಸಲು ಕ್ಷೇತ್ರದ ಹೊರಗಡೆಯಿಂದ ಕಬ್ಬನ್ನು ಎತ್ತುವಳಿ ಮಾಡಬೇಕೆಂದಾಗ ಸಾಗಾಣಿಕೆ ವೆಚ್ಚ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಕಬ್ಬಿನ ಕೊರತೆಯಿರುವ ಕಾರ್ಖಾನೆಗಳಿಂದ ಆರ್ಥಿಕವಾಗಿ ಸಾಧ್ಯತೆ ಇರುವಂತಹ ದೂರದೊಳಗೆ ಹೆಚ್ಚುವರಿ ಕಬ್ಬು ಲಭ್ಯವಿಲ್ಲದಿರುವುದರಿಂದ ಕಾರ್ಖಾನೆಗಳು ಮುಂದೆ ಬಂದಿರುವುದಿಲ್ಲ. ಬಿಜಾಪುರ ಮತ್ತು ಬೆಳಗಾವಿ ಜಿಲ್ಲೆಯಲ್ಲಿ ಕೊರತೆ ಉಂಟಾಗಬಹುದಾದ ಸಕ್ಕರೆ ಕಾರ್ಖಾನೆಗಳು ಸದರಿ ಜಿಲ್ಲೆಗಳಲ್ಲಿ ಇರುವ ಹೆಚ್ಚುವರಿ ಕಬ್ಬಿನ ಪ್ರದೇಶದಿಂದ ಸಾಗಾಣಿಕೆಗೆ ಅನುಮತಿ ನೀಡಿ ವ್ಯವಸ್ಥೆ ಮಾಡಬೇಕೆಂದು ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗಿರುತ್ತದೆ.

ಇ) ಕಳೆದ ಫೆಬ್ರವರಿ ಅಂತ್ಯದಲ್ಲಿ ರಾಜ್ಯದಲ್ಲಿ 29 ಕಾರ್ಖಾನೆಗಳು ಕಾರ್ಯ ಮಾಡಿ 59.87 ಲಕ್ಷ ಮೆ.ಟನ್ ಕಬ್ಬನ್ನು ನುರಿಸಿದ್ದವು. ಪ್ರತಿಯೊಂದು ಕಾರ್ಖಾನೆಯವರು ನುರಿಸಿರುವ ಕಬ್ಬಿನ ಪ್ರಮಾಣದ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಈ) ಈ ವರ್ಷ 27 ಸಕ್ಕರೆ ಕಾರ್ಖಾನೆಗಳು ಕಾರ್ಯಗತ ಮಾಡಿ ಫೆಬ್ರವರಿ 1994ರ ಅಂತ್ಯಕ್ಕೆ ಅರೆದಿರುವ ಒಟ್ಟು ಕಬ್ಬಿನ ಪ್ರಮಾಣ 52.79 ಲಕ್ಷ ಟನ್ನಗಳಾಗಿರುತ್ತವೆ.

ಉ) ರಾಜ್ಯದಲ್ಲಿ ಈ ವರ್ಷ ಬೆಳಗಾವಿ ಜಿಲ್ಲೆಯಿಂದ ಮಾತ್ರ ಜಿಲ್ಲಾಧಿಕಾರಿಗಳ ಅನುಮತಿ ಮೇರೆಗೆ 1,56,500 ಮೆ.ಟನ್ ಕಬ್ಬು ಮಹಾರಾಷ್ಟ್ರಕ್ಕೆ ಹೋಗಿರುತ್ತದೆ. ಇದರಿಂದ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಯಾವ ವಿಧವಾದ ತೊಂದರೆಯಾಗಿರುವುದು ಕಂಡು ಬಂದಿರುವುದಿಲ್ಲ. ಅನುಮತಿ ಮೇರೆಗೆ ಹೋಗಿರುವ ಕಬ್ಬಿನಿಂದ ರಾಜ್ಯದ ಬೊಕ್ಕಸಕ್ಕೆ ಕೊಳ್ಳುವ ತೆರಿಗೆ ರೂಪದಲ್ಲಿ ರೂ. 61,84,750-00 ಜಮಾ ಆಗಿರುವುದರಿಂದ ರಾಜ್ಯಕ್ಕೆ ಯಾವ ನಷ್ಟವೂ ಆಗಿರುವುದಿಲ್ಲ.

ಅನುಬಂಧ - ಅ

ದಿನಾಂಕ 1-10-93ರಿಂದ 28-2-94ರವರೆವಿಗೆ ಸಕ್ಕರೆ ಕಾರ್ಖಾನೆಗಳ ಕಾರ್ಯಪ್ರಗತಿಯನ್ನು ಕಳೆದ ವರ್ಷದ ಇದೇ ಅವಧಿಯೊಡನೆ ಹೋಲಿಸಲಾಗಿದೆ.

(ಮೆಟ್ರಿಕ್ ಟನ್ನುಗಳಲ್ಲಿ)

ಕ್ರ.ಸಂ.	ಸಕ್ಕರೆ ಕಾರ್ಖಾನೆಗಳು	1993-94			1992-93		
		ನುರಿಸಿದ ಕಬ್ಬು	ಉತ್ಪಾದಿಸಿದ ಸಕ್ಕರೆ	ಶೇಕಡಾ ಇಳುವರಿ	ನುರಿಸಿದ ಕಬ್ಬು	ಉತ್ಪಾದಿಸಿದ ಸಕ್ಕರೆ	ಶೇಕಡಾ ಇಳುವರಿ
1.	**ಸಹಕಾರಿ ವಲಯ :**						
1.	ಭದ್ರಾ	142037	13442	9.46	167389	15412	9.20
2.	ಬೀದರ್	195180	16794	8.60	190047	18340	9.65
3.	ದಕ್ಷಿಣ ಕನ್ನಡ	53737	5045	9.39	55526	4231	7.67
4.	ದೂದ್ಗಂಗಾಕೃಷ್ಣಾ	256330	32102	12.52	267420	31160	11.65
5.	ಘಟಪ್ರಭಾ	155000	17662	11.39	187030	22008	11.76
6.	ಹಾಲಸಿದ್ದನಾಥ್	168660	19014	11.27	177850	19707	11.08
7.	ಹಿರಣ್ಯಕೇಶಿ	502845	56390	11.21	547009	60891	11.13
8.	ಹೇಮಾವತಿ	78225	7384	9.43	178825	17772	9.94
9.	ಕಂಪ್ಲಿ	- ಕೆಲಸ	ಪ್ರಾರಂಭಿಸಿಲ್ಲ	-	38393	4017	10.46
10.	ಕರ್ನಾಟಕ	113175	11603	10.25	131600	13777	10.47
11.	ಮಲಪ್ರಭಾ	409900	46512	11.42	365100	42068	11.52
12.	ನಂದಿ	129170	14115	10.93	53450	5651	11.17
13.	ಪಾಂಡವಪುರ	105673	10205	9.66	155636	14540	9.34
14.	ರಾಯಭಾಗ್	156845	20209	12.88	206595	23649	11.45
15.	ಶ್ರೀ ಶ್ರೀರಾಮ	77796	6684	8.59	163798	16145	9.86
16.	ಸಹಕಾರಿ	31530	2532	8.08	49216	5107	10.38
	ಒಟ್ಟು	2575923	279693	10.88	2934890	314475	10.72

1	2	3	4	5	6	7	8
2.	**ಸಾರ್ವಜನಿಕ : ಜಂಟಿ ವಲಯ :**						
1.	ಮೈಸೂರು ಪೇಪರ್‌ಮಿಲ್ಸ್	251122	25488	10.15	316850	32392	10.22
2.	ಮೈಶುಗರ್	293106	25736	8.78	441818	41712	9.44
3.	ದಾವಣಗೆರೆ	116307	11104	9.55	178866	16370	9.15
4.	ಗಂಗಾವತಿ	59990	5842	9.74	95540	9480	9.92
	ಒಟ್ಟು	720525	68170	9.46	1033074	99954	9.67
3.	**ಖಾಸಗಿ ವಲಯ :**						
1.	ಬನ್ನಾರಿ ಅಮ್ಮನ್	137848	13381	9.70	137690	13309	9.66
2.	ಚಾಮುಂಡೇಶ್ವರಿ	352635	33469	9.49	436160	42955	9.85
3.	ಗೋದಾವರಿ	597950	67849	11.35	421890	49764	12.00
4.	ಐಎಸ್‌ಆರ್ ಹೊಸಪೇಟೆ	87890	8587	9.77	152270	15546	10.21
5.	ಮಹದೇಶ್ವರ	ಕೆಲಸ	ಪ್ರಾರಂಭಿಸಿಲ್ಲ	-	57366	5519	9.62
6.	ಸಿರಗುಪ್ಪ-ಗೌರಿ	54185	4839	8.93	811940	7974	9.73
7.	ಸಿರಗುಪ್ಪ-ದೇಶನೂರು	84350	8776	10.40	62605	8395	10.21
8.	ತುಂಗಭದ್ರಾ	163290	16288	9.97	200770	21980	10.38
9.	ಉಗಾರ್	500450	62836	12.45	461155	58996	12.79
	ಒಟ್ಟು	1982698	216025	10.90	2018836	222338	11.01
	ರಾಜ್ಯದ ಪೊತ್ತ	5279146	563888	10.68	5986800	636767	10.64